ಕರೆಸಿಕೊಂಡು ಕ್ರಮ ತೆಗೆದುಕೊಳ್ಳಿ.

ಶ್ರೀ ಬಸವರಾಜ ನೀ.ಶಿವಣ್ಣನವರ್:- ಮಾಡುತ್ತೇನೆ.

ವಿಷಯ:- ರಾಜ್ಯದಲ್ಲಿ 1995-96ನೇ ಸಾಲಿನಲ್ಲಿ ಕುಡಿಯುವ ನೀರಿಗಾಗಿ ವಿಚ್ರ್ ಮಾಡಿದ ಹಣ.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 60 (503)

ಶ್ರೀ ಮಂಜುನಾಥ ಸಿ.ಕುನ್ನೂರ್ (ಶಿಗ್ಗಾಂ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) 1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿಗಾಗಿ ಯಾವಯಾವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇದಕ್ಕಾಗಿ 1995-96ರಲ್ಲಿ ಎಷ್ಟು ಹಣ ವಿಚ್ರ್ ಮಾಡಲಾಗಿದೆ? ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ವಿಚ್ರ್ ಮಾಡಿದ ಪ್ರತ್ಯೇಕ ಅನುದಾನ ಕುರಿತು ಮಾಹಿತಿ ನೀಡುವುದು.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಕುಡಿಯುವ ನೀರಿಗಾಗಿ ಗ್ರಾಮೀಣ ಪ್ರದೇಶದಲ್ಲಿ 1995-96ನೇ ಸಾಲಿನಲ್ಲಿ ಕೈಗೊಂಡ ಯೋಜನೆಗಳ ವಿವರಗಳನ್ನು ಅನುಬಂಧ 'ಎ'ನಲ್ಲಿ ಮತ್ತು ಜಿಲ್ಲಾವಾರು ವಿವರಗಳನ್ನು ಅನುಬಂಧ 'ಬಿ'ನಲ್ಲಿ ನೀಡಿದೆ.

ಆ) ಒಟ್ಟು ರೂ. 13,359.76 ಲಕ್ಷ ವಿಚ್ರ್ ಮಾಡಲಾಗಿದೆ.

	ಅನುದಾನ (ಲಕ್ಷಗಳಲ್ಲಿ)	ವೆಚ್ಚ (ಲಕ್ಷಗಳಲ್ಲಿ)
ರಾಜ್ಯ	7592.63	7884.11
ಕೇಂದ್ರ	6544.00	5475.65

ಅನುಬಂಧ -'ಎ'

ರಾಜ್ಯವಲಯದ ಕುಡಿಯುವ ನೀರಿನ ಯೋಜನೆಗಳು:	ಕೇಂದ್ರವಲಯದ ಕುಡಿಯುವ ನೀರಿನ ಯೋಜನೆಗಳು:
1. ಕೊಳವೆ ನೀರು ಸರಬರಾಜು ಯೋಜನೆ	1. ಕೊಳವೆ ನೀರು ಸರಬರಾಜು ಯೋಜನೆ
2. ಕೊಳವೆ ನೀರು ಸರಬರಾಜು ಯೋಜನೆ (ಪುನಶ್ಚೇತನ)	2. ಕೊಳವೆ ನೀರು ಸರಬರಾಜು ಯೋಜನೆ (ನಿರ್ವಹಣೆ)
3. ಕೊಳವೆ ನೀರು ಸರಬರಾಜು ಯೋಜನೆಗಳನ್ನು ಹೆಚ್ಚಿಸುವುದು.	3. ಕಿರುನೀರು ಸರಬರಾಜು ಯೋಜನೆ (ನಿರ್ವಹಣೆ)
4. ಕಿರುನೀರು ಸರಬರಾಜು ಯೋಜನೆ (ಸಾಮಾನ್ಯ)	4. ಕಿರುನೀರು ಸರಬರಾಜು ಯೋಜನೆ (ಸಾಮಾನ್ಯ)
5. ಕಿರುನೀರು ಸರಬರಾಜು ಯೋಜನೆ (ಪುನಶ್ಚೇತನ)	5. ಕಿರುನೀರು ಸರಬರಾಜು ಯೋಜನೆ (ಪುನಶ್ಚೇತನ)
6. ಸಾಮಾನ್ಯ ಕೊಳವೆ ಬಾವಿಗಳು	6. ಸಾಮಾನ್ಯ ಕೊಳವೆ ಬಾವಿಗಳು
7. ಕೊಳವೆ ಭಾವಿಗಳ ನಿರ್ವಹಣೆ	ಅ. ವಿಶೇಷ ಘಟಕ ಯೋಜನೆ:
8. ತೆರೆದ ಬಾವಿಗಳು	1. ಕಿರುನೀರು ಸರಬರಾಜು ಯೋಜನೆ
9. ಗುರುತ್ವಾಕರ್ಷಣೆಯಲ್ಲಿ ನೀರು ಸರಬರಾಜು.	2. ಕೊಳವೆ ಬಾವಿ ಯೋಜನೆ
10. ಕೊಳವೆಬಾವಿಗಳ ಪುನಶ್ಚೇತನ (ಎಚ್.ಪಿ.ಎಸ್)	ಆ. ಗಿರಿಜನ ಉಪಯೋಜನೆ :
11. ಕೊಳವೆಬಾವಿಗಳ ಪುನರುಜ್ಜೀವನ (ಎಚ್.ಪಿ.ಎಸ್)	1. ಕೊಳವೆ ಬಾವಿಗಳು
ಅ. ವಿಶೇಷ ಘಟಕ ಯೋಜನೆ :	
1. ಕಿರುನಿರು ಸರಬರಾಜು ಯೋಜನೆ	
2. ಕೊಳವೆ ಬಾವಿ ಯೋಜನೆ	
ಆ. ಗಿರಿಜನ ಉಪಯೋಜನೆ:	
1. ಕೊಳವೆ ಬಾವಿಗಳು	

ಅನುಬಂಧ - ಬಿ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ನಳನೀರು ಸರಬರಾಜು		ಕಿರುನೀರು ಸರಬರಾಜು		ಕೈಪಂಪು : ಬೋರವೆಲ್ (ಕೊಳವೆಬಾವಿ ಯೋಜನೆ)	
		ಗುರಿ	ಸಾಧನೆ	ಗುರಿ	ಸಾಧನೆ	ಗುರಿ	ಸಾಧನೆ
1.	ಬೆಂಗಳೂರು (ಗ್ರಾ)	31	31	72	106	324	806
2.	ಬೆಂಗಳೂರು (ನಗರ)	30	16	50	56	231	657
3.	ಕೋಲಾರ	33	17	67	62	328	245
4.	ತುಮಕೂರು	32	38	79	91	169	666
5.	ಚಿತ್ರದುರ್ಗ	17	41	66	91	293	392
6.	ಶಿವಮೊಗ್ಗ	37	69	44	85	391	396
7.	ಚಿಕ್ಕಮಗಳೂರು	20	44	37	20	291	352
8.	ಮೈಸೂರು	43	103	97	169	318	417
9.	ಮಂಡ್ಯ	32	42	54	79	164	76
10.	ಹಾಸನ	26	36	46	56	301	317
11.	ದಕ್ಷಿಣ ಕನ್ನಡ	79	40	67	68	456	360
12.	ಕೊಡಗು	18	8	32	13	179	236
13.	ಬೆಳಗಾಂ	100	90	65	59	268	299
14.	ಧಾರವಾಡ	72	56	76	60	243	322
15.	ಉತ್ತರ ಕನ್ನಡ	44	37	60	44	276	530
16.	ಬಿಜಾಪುರ	38	59	65	70	204	354
17.	ಗುಲ್ಬರ್ಗ	54	57	58	75	357	546
18.	ಬೀದರ್	23	47	48	56	198	154
19.	ರಾಯಚೂರು	48	38	75	54	329	525
20.	ಬಳ್ಳಾರಿ	23	31	45	37	175	275

ಶ್ರೀ ಮಂಜುನಾಥ ಸಿ.ಕುನ್ನೂರು:- ಮಾನ್ಯ ಅಧ್ಯಕ್ಷರೇ, ಉತ್ತರದಲ್ಲಿ 1995-96ನೇ ಸಾಲಿನಲ್ಲಿ ಕರ್ನಾಟಕ ರಾಜ್ಯದಲ್ಲಿ ಕುಡಿಯುವ ನೀರಿನ ಸಲುವಾಗಿ ಯಾವ ಯಾವ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ ಎಂದು ಕೇಳಿದ್ದಕ್ಕೆ ಆ ಯೋಜನೆಗಳನ್ನು ವಿವರಿಸುವುದರ ಜೊತೆಗೆ ಆ ಯೋಜನೆಗಳಿಗೆ 133.59 ಕೋಟಿ ರೂಪಾಯಿಗಳು ಖರ್ಚಾಗಿದೆ ಎನ್ನತಕ್ಕಂಥಾದ್ದನ್ನು ಕೂಡ ಹೇಳಿದ್ದಾರೆ. ಆ ಯೋಜನೆಗಳಿಗೆ ಹಣವನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರದಿಂದ ಒದಗಿಸುತ್ತಿದ್ದು ಅನುಬಂಧ 7ರಲ್ಲಿ ತೋರಿಸಿದ ಪ್ರಕಾರ ಮತ್ತು ಅನುಬಂಧ 'ಬಿ' ಯಲ್ಲಿ ತೋರಿಸಿದ ಪ್ರಕಾರ ವಿವರವಾದ ಮಾಹಿತಿಯನ್ನು ಈ ನಳನೀರು ಸರಬರಾಜು ಮತ್ತು ಕಿರು ನೀರು ಸರಬರಾಜು ಯೋಜನೆ ಬಿಟ್ಟು ಇನ್ನು ಬೋರ್‌ವೆಲ್‌ಗಳ ಬಗ್ಗೆ ಇನ್ನಿತರ ಯೋಜನೆಗಳ ಬಗ್ಗೆ ಮಾಹಿತಿಯನ್ನು ನೀಡಿರುವುದಿಲ್ಲ. ಮತ್ತು ಈ ನಳನೀರು ಸರಬರಾಜು ಯೋಜನೆ ಮತ್ತು ಕಿರು ನೀರು ಸರಬರಾಜು ಯೋಜನೆಗಳನ್ನು ತಾವು ಗುರಿ ಮತ್ತು ಸಾಧನೆಯನ್ನು ಮಾತ್ರ ಇದರಲ್ಲಿ ತೋರಿಸಿದ್ದು ಗುರಿ ಸಾಧನೆಗಿಂತ ಅನೇಕ ಗ್ರಾಮಗಳಲ್ಲಿ ಈ ನೀರಿನ ಯೋಜನೆಗಳು ಅತಿ ಅವಶ್ಯಕವಾಗಿ ಬೇಕಾಗಿದ್ದು ಅವಶ್ಯಕತೆಗಳಿಗೆ ಅನುಗುಣವಾಗಿ ಹೆಚ್ಚಿನ ಪ್ರಮಾಣದಲ್ಲಿ ಯೋಜನೆಗಳನ್ನು ಕೈಗೊಳ್ಳಬೇಕೆಂದು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಮತ್ತು ಇಂತಹ ಯೋಜನೆಗಳನ್ನು ನಳನೀರು ಸರಬರಾಜು ಯೋಜನೆ ಮತ್ತು ಕಿರುನೀರು ಸರಬರಾಜು ಯೋಜನೆಗಳನ್ನು ಪ್ರಾರಂಭವಾಗಿ ನಾಲ್ಕಾರು ವರ್ಷಗಳು ಆದರೂ ಸಹ ಅವು ತೀವ್ರಗತಿಯಲ್ಲಿ ಮುಗಿಯುವುದಿಲ್ಲ. ಅಲ್ಲಿ ಪೈಪ್ ಲೈನ್ ಹಾಕತಕ್ಕಂಥಾದ್ದು ಮತ್ತು ಟ್ಯಾಂಕ್‌ಗಳನ್ನು ಕಟ್ಟತಕ್ಕಂತಾದ್ದು ಕಳಪೆ ಮಟ್ಟದ ಪ್ರಮಾಣದಲ್ಲಿ ಕಾಮಗಾರಿಗಳ ಕೆಲಸ ಆಗುತ್ತಿದೆ. ಆ ಬಗ್ಗೆ ತಾವು ಯಾವ ಕ್ರಮಗಳನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಕೇಳಿದಂತಹ ವಿವರಗಳ ಪ್ರತಿ ಅವರಿಗೆ ಹೋಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಅನುಬಂಧ 'ಬಿ'ನಲ್ಲಿ ನಾವು ಬೋರವೆಲ್‌ಗಳ ಬಗ್ಗೆ ಮಾಹಿತಿಯನ್ನು ಕೊಟ್ಟಿದ್ದೇವೆ. ಮಾನ್ಯ ಶಾಸಕರು ಕೇಳಿದಂತಹ ಪ್ರಶ್ನೆಗೆ ಅನುಗುಣವಾಗಿ ಕೈ ಪಂಪ್ ಅಳವಡಿಸಿರತಕ್ಕಂಥ ವಿವರಗಳನ್ನೂ ಸಹ ನಾನು ಕೊಟ್ಟಿದ್ದೇನೆ. ಅವರು ಹೇಳಿದಂತೆ ಈ ಯೋಜನೆಗಳು ಕಿರುನೀರು ಸರಬರಾಜು ಯೋಜನೆ ಆಗಬಹುದು ಅಥವಾ ನಳನೀರು ಸರಬರಾಜು ಯೋಜನೆ ಇವೆಲ್ಲವೂ ಸಹ ವಿಳಂಬವಾಗುವುದಕ್ಕೆ ಕಾರಣ ನಾವು ನಮ್ಮ ಮಾತುಗಳನ್ನು ಅನುಗುಣವಾಗಿ ಇಟ್ಟುಕೊಂಡಿಲ್ಲ. ಚುನಾವಣೆಯ ಪೂರ್ವದ ಸಂದರ್ಭದಲ್ಲಿ ಅದು ಏನೇ ಇರಲಿ ಯಾವುದೇ ಕಾರಣಗಳು ಆಗಿದ್ದರೂ ಕೂಡ ಶೇಕಡ ಒಂದನೇ ಮೂರು ಭಾಗದ ಅನುದಾನವನ್ನು ಏರ್ಪಾಡು ಮಾಡದೇ ಅನಿವಾರ್ಯ ಕಾರಣಗಳಿಂದ ನಾವು ಒದಗಿಸಿದಂತಹ ಹಣಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಹಣವನ್ನು ಖರ್ಚು ಮಾಡಿದ್ದೇವೆ. ಆ ಕಾರಣಕ್ಕಾಗಿಯೇ ಅರ್ಧ ಆಗಿ 4-5 ವರ್ಷಗಳವರೆಗೂ ಮುಂದುವರಿಸಿರತಕ್ಕಂಥ ಕಾಮಗಾರಿಗಳು ಆಗಿವೆ. ಗುಣ ಮಟ್ಟದ ವಿಚಾರದಲ್ಲಿಯೂ ಸಹ ತಾವು ಏನು

ಹೇಳಿದ್ದೀರಿ ಅದು ಬಹಳಷ್ಟು ಮಟ್ಟಿಗೆ ಸತ್ಯವಾಗಿರತಕ್ಕಂಥ ವಿಷಯ. ಖರೀದಿ ಮಾಡಿರತಕ್ಕಂಥ ಸಾಮಗ್ರಿಗಳು ಕಳಪೆಯಾಗಿರತಕ್ಕಂಥ ಸಾಮಗ್ರಿಗಳಾಗಿವೆ ಎನ್ನುವುದು ನಮ್ಮ ಗಮನಕ್ಕೆ ಸಹ ಬಂದಿದೆ. ತಮಗೆ ಗೊತ್ತಿದ್ದಂತೆ ಧಾರವಾಡ ಜಿಲ್ಲೆಯಲ್ಲಿ ಸುಮಾರು 3-4 ಜನ ಉಗ್ರಾಣ ಪಾಲಕರನ್ನು ನಾವು ಅಮಾನತ್ತಿನಲ್ಲಿ ಇಟ್ಟಿದ್ದೇವೆ. 3ಜನ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನೀಯರ್ಸ್ ಮೇಲೆ ನಾವು ಕ್ರಮ ತೆಗೆದುಕೊಂಡಿದ್ದೇವೆ. ಒಬ್ಬರ ಮೇಲೆ ನಾವು ಕ್ರಿಮಿನಲ್ ಮೊಕದ್ದಮೆಯನ್ನು ಸಹ ಹಾಕಿದ್ದೇವೆ. ಎಲ್ಲಾ ವಿವರಗಳು ಸಹ ಇವೆ. ಅದಷ್ಟು ಬೇಗನೇ ಪ್ರಯತ್ನವನ್ನು ಮಾಡಿ ಗುಣಮಟ್ಟವನ್ನು ಕಾಪಾಡುವಂಥ ಪ್ರಯತ್ನವನ್ನು ಸಹ ನಾವು ಮಾಡುತ್ತೇವೆ.

12.40 ಪಿಎಂ

ಶ್ರೀ ಡಿ.ಆರ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಳ ನೀರು ಮತ್ತು ಕಿರು ನೀರು ಹಾಗೂ ಕೈ ಪಂಪುಗಳ ಮೂಲಕ ಕೊಡುವ ನೀರಿನ ಕೆಲಸಗಳು, ಹಿಂದಿನ ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಮತ್ತು ಹಣಕಾಸಿನ ಮಂತ್ರಿಗಳವರ ಜಿಲ್ಲೆಗಳಲ್ಲಿ ಯಾವ ರೀತಿ ಸಾಧನೆಯಾಗಿದೆ? ಅದೇ ರೀತಿ ಸಾಧನೆಯನ್ನು ಉಳಿದ ಜಿಲ್ಲೆಗಳಲ್ಲೂ ಮಾಡುವುದಕ್ಕೂ ಏನು ಕ್ರಮ ಕೈಗೊಳ್ಳಲಾಗುತ್ತದೆ?

ಶ್ರೀ ಎಂ.ಪಿ.ಪ್ರಕಾಶ್:- ಹಿಂದಿನ ಸರ್ಕಾರವೆಂದರೆ 1994ರ ಆಚೆಯ ಸರ್ಕಾರವೊ? ಸನ್ಮಾನ್ಯ ಅಧ್ಯಕ್ಷರೆ, ಆಗತ್ಯಗಳಿಗೆ ಅನುಗುಣವಾದ ರೀತಿಯಲ್ಲಿ ನಾವು ಕುಡಿಯುವ ನೀರನ್ನು ಪೂರೈಕೆ ಮಾಡುತ್ತೇವೆಯೇ ಏನಃ ಅದು ಮುಖ್ಯ ಮಂತ್ರಿಗಳ ಜಿಲ್ಲೆ ಅಥವಾ ಇನ್ನೊಬ್ಬರ ಜಿಲ್ಲೆ ಎನ್ನುವ ಪ್ರಶ್ನೆ ಬರುವುದಿಲ್ಲ. ಹೆಚ್ಚು ದಕ್ಷರಾಗಿರತಕ್ಕಂಥ ಜನ ಇದ್ದಾಗ ಮತ್ತು ಹೆಚ್ಚು ಕಾರ್ಯಪ್ರವೃತ್ತರಾಗಿರತಕ್ಕಂಥ ಅಧಿಕಾರಿಗಳು ಮತ್ತು ನಾಯಕತ್ವ ಇರುವಂಥ ಸಂದರ್ಭದಲ್ಲಿ ಹೆಚ್ಚು ಕೆಲಸಗಳಾಗುವುದು ಸಹಜ. ಮಾನ್ಯ ಸದಸ್ಯರ ಪಕ್ಕದಲ್ಲೇ ಕುಳಿತಿರುವ ಮಾನ್ಯ ಶಿವರಾಮೇಗೌಡರಾಗಲೀ, ಮಾನ್ಯ ರಾಮಸ್ವಾಮಿಯವರಾಗಲೀ ಅವರು ಬಹಳ ಹೋರಾಡಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಮಾಡಿಸುತ್ತಾರೆ. ಆ ದೃಷ್ಟಿಯಿಂದ ಹಾಸನ ಜಿಲ್ಲೆಗೆ ಹೆಚ್ಚು ಖರ್ಚಾಗಿದೆ ಅಷ್ಟೇ. ಅಂತಹ ನಾಯಕತ್ವವನ್ನು ನಾವು ಬೆಳೆಸಿಕೊಳ್ಳಬೇಕಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಈ ಪಟ್ಟಿಯಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟೆಷ್ಟು ತೆರೆದ ಬಾವಿಗಳನ್ನು ಮತ್ತು ಬೋರ್ ವೆಲ್‌ಗಳನ್ನು ಮಾಡಿಸಲಾಗಿದೆಯೆಂಬ ಮಾಹಿತಿಯನ್ನು ಕೊಡಲಾಗಿದೆ. ಸರ್ಕಾರದ ವೆಚ್ಚದಲ್ಲಿ ತೋಡಿಸಲಾಗಿರುವ ಬೋರ್ ವೆಲ್‌ಗಳಿಗೆ ಪ್ರಭಾವಿ ಖಾಸಗಿ ವ್ಯಕ್ತಿಗಳು ಮೋಟರ್‌ಗಳನ್ನು ಹಾಕಿ ಸ್ವಂತ ತೋಟಕ್ಕೆ ಉಪಯೋಗಿಸುತ್ತಿದ್ದಾರೆಂಬ ಅನೇಕ ದೂರುಗಳು ಕೆಲವು ಜಿಲ್ಲೆಗಳಲ್ಲಿ ಕೇಳಿ ಬರುತ್ತಿದೆ. ಸರ್ಕಾರಿ ಬಾವಿಗಳು ಎಲ್ಲೆಲ್ಲಿ ಇವೆ ಎಂಬ ಮಾಹಿತಿ ಸಿಗುವ ಪ್ರಾಪರ್ಟಿ ರಿಜಿಸ್ಟರ್‌ನ್ನು ಪಂಚಾಯಿತಿಗಳಲ್ಲಿ ಮೈನ್‌ಟೆನ್ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಅಧ್ಯಕ್ಷರೆ, ಎಲ್ಲಿ ಕೊಳವೆ ಬಾವಿಗಳನ್ನು ತೋಡಲಾಗುತ್ತದೆಯೋ ಅಲ್ಲಿನ ಪಂಚಾಯಿತಿ ಅಧ್ಯಕ್ಷರ ಅಥವಾ ಕಾರ್ಯದರ್ಶಿಯವರ ಸಹಿ ತೆಗೆದುಕೊಂಡು ಬರಬೇಕೆನ್ನುವ ನಿಯಮವನ್ನು ಜಾರಿ ಮಾಡಲಾಗಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಷ್ಟು ಕೊಳವೆ ಬಾವಿಗಳು ಇವೆ ಎನ್ನುವ ಮಾಹಿತಿಯನ್ನು ತಾಲ್ಲೂಕು ಪಂಚಾಯಿತಿಗೆ ಕಳುಹಿಸಿಕೊಡಬೇಕಾಗುತ್ತದೆ, ಬೋರ್ ವೆಲ್‌ಗಳನ್ನು ರಿಪೇರಿ ಮಾಡುವಂಥ ಸಿಬ್ಬಂದಿಗಳಿಗೆ ಯಾವ ಯಾವ ಊರಿನಲ್ಲಿ ಎಷ್ಟೆಷ್ಟು ಬೋರ್‌ವೆಲ್‌ಗಳಿವೆ ಎಂಬ ಬಗ್ಗೆ ಪೂರ್ಣ ಮಾಹಿತಿ ಇರುವ ಪುಸ್ತಕವನ್ನೂ ಸಹ ಕೊಡಲಾಗಿದೆ. ತಮ್ಮ ಕ್ಷೇತ್ರದಲ್ಲಿ ಈ ರೀತಿಯ ಮಾಹಿತಿ ಪುಸ್ತಕಗಳನ್ನು ಮಾಡದೇ ಹೋಗಿದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ನಾನು ತೀವ್ರವಾದ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಮಂಜುನಾಥ್ ಸಿ.ಕುನ್ನೂರ್:- ಮಾನ್ಯ ಅಧ್ಯಕ್ಷರೆ, ನಮ್ಮ ಧಾರವಾಡ ಜಿಲ್ಲೆಯಲ್ಲಿ ಸುಮಾರು 322 ಕೊಳವೆ ಬಾವಿಗಳನ್ನು ಕೊರೆಸಲಾಗಿದೆ. ಈ ಬೋರ್‌ವೆಲ್‌ಗಳ ಪಂಪ್‌ಗಳು ಕೆಟ್ಟು ಹೋದಾಗ ಗ್ರಾಮ ಪಂಚಾಯಿತಿಯ ಮೂಲಕ ರಿಪೇರಿ ಮಾಡಿಸಬೇಕೇ ಅಥವಾ ತಾಲ್ಲೂಕು ಪಂಚಾಯಿತಿ ಇಂಜಿನೀಯರಿಂಗ್ ವಿಭಾಗದವರು ರಿಪೇರಿ ಮಾಡಬೇಕೇ ಎಂದು ದ್ವಂದ್ವ ಅಭಿಪ್ರಾಯವುಂಟಾಗಿದೆ. ಜೊತೆಗೆ ರಿಪೇರಿ ಮಾಡಲು ಹೋಗಬೇಕಾದರೆ ಬೇಕಾಗುವ ವಾಹನ ಮತು ಮೆಟೀರಿಯಲ್ಸ್‌ನ್ನು ಒದಗಿಸುವ ಬಗ್ಗೆ ಸರಿಯಾದ ಕಾರ್ಯನಿರ್ವಹಣೆಯಾಗುತ್ತಿಲ್ಲ. ಆದುದರಿಂದ, ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಸರ್ಕಾರದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಮತ್ತು ಶಿಗ್ಗಾವ್ ತಾಲ್ಲೂಕಿನ ಬಂಕಾಪುರದಲ್ಲಿ 20 ಸಾವಿರ ಜನಸಂಖ್ಯೆ ಇದೆ. ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಬಹಳ ಇದೆ. ಇದರ ಬಗ್ಗೆ ಮಾನ್ಯ ಸಚಿವರು ಅಲ್ಲಿಗೆ ಬಂದಿದ್ದಾಗ ಮನವಿಯನ್ನು ಮಾಡಿಕೊಂಡಿದ್ದೇನೆ. ಆದುದರಿಂದ ಕೂಡಲೇ ಇಲ್ಲಿರುವ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬೇಕು. ಅದೇ ರೀತಿ ತಡಸ್ ಗ್ರಾಮದಲ್ಲೂ ಕುಡಿಯುವ ನೀರಿನ ಸಮಸ್ಯೆ ಬಹಳ ಇರುವುದರಿಂದ ಪರಿಹಾರ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಮಾನ್ಯ ಸಚಿವರಲ್ಲಿ ಕೇಳಿಕೊಂಡಿದ್ದೇನೆ. ಈ ತಡಸ್ ಗ್ರಾಮದಲ್ಲಿರುವ ಕುಡಿಯುವ ನೀರಿನ ಸಮಸ್ಯೆಯನ್ನು ನಿವಾರಣೆ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:- ಕುಡಿಯುವ ನೀರಿನ ವಿಚಾರದಲ್ಲಿ ಎಲ್ಲಾ ಕೆಲಸಗಳನ್ನು ಗ್ರಾಮ ಪಂಚಾಯಿತಿಯವರೇ ಮಾಡಬೇಕೆನ್ನುವ ನಿಯಮವನ್ನು ಮಾಡಿದ್ದರೂ ಅವರಿಗೆ ವಾರ್ಷಿಕ ಒಂದು ಲಕ್ಷ ಅನುದಾನ ಮಾತ್ರ ಕೊಡುತ್ತಿರುವುದರಿಂದ ಮತ್ತು ಸಂಪನ್ಮೂಲಗಳ ಲಭ್ಯತೆ ಬಹಳ ಕಡಿಮೆ ಇರುವುದರಿಂದ ಸ್ವಲ್ಪ ಮಟ್ಟಿಗೆ ನಿಯಮಾವಳಿಗಳಲ್ಲಿ ವ್ಯತ್ಯಾಸ ಇದ್ರೂ ಕೂಡ ತಾಲ್ಲೂಕು ಮಟ್ಟದ ಇಂಜಿನೀಯರಿಂಗ್ ಡಿಪಾರ್ಟ್‌ಮೆಂಟಿನವರೇ ಈ ಕೆಲಸವನ್ನು ನಿರ್ವಹಿಸಬೇಕಾಗುತ್ತದೆ. ಇದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ಕನಿಷ್ಟ ಪಕ್ಷ ಎರಡು ವ್ಯಾನ್‌ಗಳನ್ನಾದರೂ ಇಟ್ಟುಕೊಳ್ಳಬೇಕೆಂದು ಸೂಚನೆ ಕೊಟ್ಟಿದ್ದೇವೆ. ಯಾವ ಯಾವ ಹಳ್ಳಿಗಳಿಗೆ ಹೋಗಿ ಬೋರ್ ವೆಲ್‌ಗಳನ್ನು

ರಿಪೇರಿ ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿಯನ್ನು ಪ್ರತಿ ತಿಂಗಳೂ ಇಡಬೇಕಾಗುತ್ತದೆ. ಇದರಲ್ಲಿ ಆಡಳಿತಾತ್ಮಕ ದೋಷಗಳಿರುವುದನ್ನು ನಾನೂ ಒಪ್ಪುತ್ತೇನೆ. ಈ ಬಗ್ಗೆ ಮಾನ್ಯ ಸದಸ್ಯರೂ ಸಹ ಕೆ.ಡಿ.ಬಿ. ಮೀಟಿಂಗ್‌ನಲ್ಲಿ ವಿಷಯವನ್ನು ಪ್ರಸ್ತಾಪಿಸಿ ಗಮನಕ್ಕೆ ತರಬೇಕೆಂದು ಹೇಳುತ್ತೇನೆ. ಇನ್ನು ತಡಸ್ ಮತ್ತು ಬಂಕಾಪುರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವ ಸಲುವಾಗಿ ಈ ವರ್ಷದ ಕ್ರಿಯಾ ಯೋಜನೆಯಲ್ಲಿ ಆ ಕೆಲಸವನ್ನು ಸೇರಿಸಲಾಗಿದೆ. ಕ್ರಿಯಾ ಯೋಜನೆಯಲ್ಲಿ ನಿಗದಿಯಾಗಿರುವುದಕ್ಕಿಂತ ಹೆಚ್ಚಿನ ಅನುದಾನ ಬೇಕಾದಲ್ಲಿ ಅದನ್ನು ಮಾನ್ಯ ಸದಸ್ಯರು ನನ್ನ ಗಮನಕ್ಕೆ ತಂದರೆ ಅಗತ್ಯವಿರುವ ಹೆಚ್ಚುವರಿ ಅನುದಾನವನ್ನು ಬಿಡುಗಡೆ ಮಾಡುತ್ತೇವೆ. ಇನ್ನೊಂದು ವಿಷಯವನ್ನು ಇಲ್ಲಿ ಹೇಳಿದರೆ ಅಪ್ರಸ್ತುವಾಗಲಾರದೆಂದು ಭಾವಿಸುತ್ತೇನೆ. ಕೆಲವು ದಿವಸಗಳ ಹಿಂದೆ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳ ಸಭೆ ನಡೆದಾಗ ರಾಷ್ಟ್ರದ ಎಲ್ಲಾ ಗ್ರಾಮಗಳಿಗೂ ಕನಿಷ್ಠ ಸೌಲಭ್ಯಗಳನ್ನು ಕಲ್ಪಿಸಿಕೊಡತಕ್ಕಂಥ 7 ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗುವುದೆಂದು ತೀರ್ಮಾನಕ್ಕೆ ಬರಲಾಗಿದೆ. ಅದರಲ್ಲಿ ರಾಷ್ಟ್ರದ ಎಲ್ಲಾ ಗ್ರಾಮಗಳಿಗೂ ಕುಡಿಯುವ ನೀರಿನ ಸೌಕರ್ಯ ಒದಗಿಸುವುದಕ್ಕೆ ನೂರಕ್ಕೆ ನೂರರಷ್ಟು ಅನುದಾನವನ್ನು ಕೇಂದ್ರ ಸರ್ಕಾರವೇ ವಹಿಸಿಕೊಳ್ಳಲಾಗುತ್ತದೆಂದು ತಿಳಿದುಬಂದಿದೆ. ಇದರ ಜೊತೆಗೆ ಎಲ್ಲಾ ಗ್ರಾಮಗಳಿಗೂ ಸರ್ವ ಋತು ರಸ್ತೆ ಸೌಕರ್ಯ ಕೊಡುವುದು, ಮನೆಗಳನ್ನು ಕಟ್ಟಿಸಿಕೊಡುವುದು ಸಾರ್ವಜನಿಕರಿಗೆ ಆಹಾರ ಧಾನ್ಯ ವಿತರಣೆಯ ವಿಚಾರ ಇವುಗಳಿಗೆ ಸಂಬಂಧಪಟ್ಟಹಾಗೆ ಒಂದು ಚಿಂತನೆ ದೇಶದಲ್ಲೇ ಪ್ರಥಮ ಬಾರಿಗೆ ನಡೆದಿದೆ. ಕೇಂದ್ರ ಸರ್ಕಾರದ ಈ ಸ್ತುತ್ಯಾರ್ಹವಾದ ಕೆಲಸದಿಂದ ನಮ್ಮ ರಾಜ್ಯ ಸರ್ಕಾರಕ್ಕೂ ಹೆಚ್ಚು ಅನುಕೂಲವಾಗುತ್ತದೆ. ಕೇಂದ್ರ ಸರ್ಕಾರವೇ ಈ ಎಲ್ಲಾ ಕುಡಿಯುವ ನೀರಿನ ಯೋಜನೆಗೆ ಹಣ ಕೊಡುವುದರಿಂದ ನಮಗೆ ಒಂದು ವರದಾನವಾಗುತ್ತದೆ. ಅದನ್ನು ಕೇವಲ ಎರಡು ವರ್ಷಗಳಲ್ಲಿ ಮಾಡಿ ಮುಗಿಸಬೇಕೆಂಬ ಸೂಚನೆಯನ್ನೂ ಕೂಡ ಕೊಟ್ಟಿದ್ದಾರೆ. ಆದುದರಿಂದ, ಇನ್ನು ಎರಡು ವರ್ಷಗಳಲ್ಲಿ ರಾಜ್ಯದ ಎಲ್ಲಾ ಗ್ರಾಮಗಳಲ್ಲಿ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಬಹುದೆಂದು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ.

ಶ್ರೀ ಸುಭಾಷ್ ಆರ್.ಗುತ್ತೇದಾರ್:- ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದ ಸುಕ್ಷಾಮಾಡಿ ಮತ್ತು ಹಡಲ್ಗಿ ಎಂಬ ಎರಡು ಹಳ್ಳಿಗಳಲ್ಲಿ ಸರ್ಕಾರದಿಂದ ಬೋರ್‌ವೆಲ್ ಜಾತಿ ಪಂಪ್ ಕೊಡಿಸಿದ್ದರೂ ಖಾಸಗಿಯವರು ಊರಿಗೆ ನೀರು ಕೊಡದೆ ತಮ್ಮ ಜಮೀನುಗಳಿಗೆ ನೀರು ತೆಗೆದುಕೊಳ್ಳುತ್ತಿದ್ದಾರೆ. ಇದರ ಬಗ್ಗೆ ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್‌ರವರಿಗೆ ಹೇಳಿದರೂ ಕ್ರಮ ತೆಗೆದುಕೊಂಡಿಲ್ಲ. ಆದಕ್ಕೋಸ್ಕರ ತಮ್ಮ ಮುಖಾಂತರ ಮಂತ್ರಿಗಳ ಗಮನಕ್ಕೆ ತರಲಿಚ್ಛಿಸುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೆ, ಇದು ಬಹಳ ಗುರುತರವಾದ ಆಪಾದನೆಯಾಗಿದೆ. ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಲು ಈ ದಿವಸವೇ ನಾನು ಆದೇಶ ಕೊಡುತ್ತೇನೆ.

ಶ್ರೀ ಚಂದ್ರಪ್ಪ:- ಸನ್ಮಾನ್ಯ ಗೌರವಾನ್ವಿತ ಅಧ್ಯಕ್ಷರೆ, ಕಳೆದ ಬೇಸಿಗೆಯಲ್ಲಿ ಸರ್ಕಾರದ ವತಿಯಿಂದ ನಮ್ಮ ಕ್ಷೇತ್ರದಲ್ಲಿ ಕುಡಿಯುವ ನೀರಿನ ಸಮಸ್ಯೆ ನಿವಾರಿಸುವುದಕ್ಕಾಗಿ ನಾಲ್ಕೂವರೆ ಇಂಚು ವ್ಯಾಸವುಳ್ಳ ಬೋರ್‌ವೆಲ್‌ಗಳನ್ನು ತೋಡಿಸಲಾಗಿದೆ. ಈ ಬೋರ್ ವೆಲ್‌ಗಳು ಸುಮಾರು 250 ರಿಂದ 300 ಅಡಿ ಆಳದವರೆಗೂ ಹೋಗಿವೆ. ಈ ಬೋರ್ ವೆಲ್‌ಗಳು ನಾಲ್ಕೂವರೆ ಇಂಚು ಮಾತ್ರ ವ್ಯಾಸ ಇರುವುದರಿಂದ ಪಂಪ್‌ನ್ನು ಕೂಡಿಸಿ ನೀರನ್ನು ಮೇಲೆ ಎತ್ತಲು ಸಾಧ್ಯವಾಗುತ್ತಿಲ್ಲ. ಆದುದರಿಂದ ಇನ್ನು ಮುಂದಕ್ಕಾದರೂ ನಾಲ್ಕೂವರೆ ಇಂಚು ವ್ಯಾಸವುಳ್ಳ ಬೋರ್ ವೆಲ್‌ಗಳನ್ನು ಕೊರೆಸುವ ಬದಲು 6 ಇಂಚು ವ್ಯಾಸವುಳ್ಳ ಬೋರ್‌ವೆಲ್‌ಗಳನ್ನು ಮಾತ್ರ ಕೊರೆಸಬೇಕು.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೆ, ಆಯಾ ಪ್ರದೇಶಗಳಲ್ಲಿರತಕ್ಕಂಥ ಕೆಲವು ವಿಶೇಷವಾದ ಪ್ರಕರಣಗಳನ್ನು ಪರಿಗಣಿಸಿ ಯಾವ ವ್ಯಾಸದ ಬೋರ್‌ವೆಲ್‌ಗಳನ್ನು ಕೊರೆಸಬೇಕೋ ಅದೇ ರೀತಿ ಮಾಡಲು ಆಯಾ ಜಿಲ್ಲಾ ಪಂಚಾಯಿತಿಗೆ ಅಧಿಕಾರವನ್ನು ಕೊಡಲಾಗಿದೆ. ನಾಲ್ಕೂವರೆ ಇಂಚು ಬದಲು 6 ವ್ಯಾಸವುಳ್ಳ ಬೋರ್‌ವೆಲ್‌ಗಳನ್ನು ತೋಡಿಸುವುದಕ್ಕೆ ಜಿಲ್ಲಾ ಪಂಚಾಯಿತಿಗಳಿಗೇ ಅಧಿಕಾರ ಇದೆ.

ಅಧ್ಯಕ್ಷರು:- ಮಾನ್ಯ ಸಚಿವರು ಈ ಬಗ್ಗೆ ಒಂದು ಜನರಲ್ ಸರ್‌ಕ್ಯುಲರ್ ಕಳುಹಿಸಿಕೊಟ್ಟರೆ ಅನುಕೂಲವಾಗುತ್ತದೆ. ಕಾಸ್ಟ್‌ವೈಸ್ ನಾಲ್ಕೂವರೆ ಇಂಚು, ಆರು ಇಂಚುಗಳಿಗೆ ಅಂಥಹ ವ್ಯತ್ಯಾಸವೇನೂ ಆಗುವುದಿಲ್ಲ. ಮಾನ್ಯ ಸದಸ್ಯರು ಹೇಳಿದಹಾಗೆ ಆರು ಇಂಚು ಪೈಪು ಹಾಕಿದರೆ ಏನಾಗುತ್ತದೆ ಎಂದರೆ ಊರಿನವರು ಯಾರಾದರೂ ಮುಂದೆ ಬಂದು ಒಂದು ಪಂಪ್-ಮೋಟಾರ್ ಹಾಕಿಕೊಂಡರೆ ಅದರ ಮೂಲಕ ನೀರನ್ನು ಲಿಫ್ಟ್ ಮಾಡಲು ಅನುಕೂಲವಾಗುತ್ತದೆ. ಇಲ್ಲವಾದರೆ ಆ ಹ್ಯಾಂಡ್‌ಪಂಪ್ ಒಂದು ಲೆಂಥ್ ಶಾರ್ಟ್‌ಏಜ್ ಆದರೂ ಕೂಡ ನೀರು ತೆಗೆಯುವುದು ಕಷ್ಟವಾಗುತ್ತದೆ. ಅವರಿಗೆ ಎಷ್ಟೇ ಅಧಿಕಾರವಿದ್ದರೂ ಕೂಡ by way of a kind of education ತಾವು ದಯಮಾಡಿ ಒಂದು ಸರ್ಕ್ಯುಲರ್ ಕಳುಹಿಸಿಕೊಟ್ಟರೆ that will be helpful to the entire state.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಶಾಸಕರು ಬಹಳ ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಅದನ್ನು ಮಾನ್ಯ ಸಭಾಧ್ಯಕ್ಷರು ಅನುಮೋದಿಸಿದ್ದಾರೆ. ಈ ಸಂದರ್ಭದಲ್ಲಿ ಅಪ್ರಸ್ತುತವಲ್ಲದಿದ್ದರೂ ಕೂಡ ನಮ್ಮ ಅಧ್ಯಕ್ಷರು ಕೊಳವೆಬಾವಿಗಳ ವಿಚಾರದಲ್ಲಿ ಶ್ರೀನಿವಾಸಪುರದ ಮತದಾರ ಕ್ಷೇತ್ರದಲ್ಲಿ ಬೇರೆ ಬೇರೆ ಪಾಸಿಗಿ ವ್ಯಕ್ತಿಗಳ ಮೂಲಕವಾಗಿ ಟ್ಯಾಂಕ್‌ಗಳನ್ನು ಕಟ್ಟಿಸಿಕೊಡತಕ್ಕಂಥಾದ್ದು, ಪೈಪ್‌ಗಳನ್ನು ತೆಗೆದುಕೊಡತಕ್ಕಂಥಾದ್ದು ಮುಂತಾದವುಗಳನ್ನು ಮಾಡಿ ನಮ್ಮ ಯೋಜನೆಗಳಿಗೆ ಅನುಗುಣವಾದಂಥ ರೀತಿಯಲ್ಲಿ ಜನಗಳು ಪಾಲ್ಗೊಳ್ಳುವಂಥ ಕೆಲಸವನ್ನೂ ಕೂಡ ಮಾಡಿದ್ದಾರೆ. ಸಿಂಟೆಕ್ಸ್‌ಟ್ಯಾಂಕ್‌ಗಳನ್ನು ತಂದುಕೊಡುವುದು, ಪೈಪ್‌ಲೈನ್‌ಗಳನ್ನು ತಂದುಕೊಡುವಂಥದ್ದು, ಅಲ್ಲಿ ದೋಬಿಘಾಟ್‌ಗಳನ್ನು ಕಟ್ಟಿಸಿಕೊಡತಕ್ಕಂಥಾದ್ದು ಮುಂತಾದ ಒಳ್ಳೆಯ ಕೆಲಸಗಳು

ಶ್ರೀನಿವಾಸಪುರದಲ್ಲಿ ವ್ಯಾಪಕವಾಗಿ ಈಗ ಆಗುತ್ತಾ ಇದೆ. ಈ ಒಂದು ಮಾದರಿಯನ್ನು ಬೇರೆ ಶಾಸಕರುಗಳು ಕೂಡ ಅನುಸರಿಸಬಹುದೆಂದು ತಮ್ಮ ಮೂಲಕ ಹೇಳಬಯಸುತ್ತೇನೆ. ಈ ದಿವಸವೇ ಆ ವಿಷಯದಲ್ಲಿ ಒಂದು ಸುತ್ತೋಲೆಯನ್ನು ಹೊರಡಿಸುತ್ತೇವೆ.

ಶ್ರೀ ಟಿ.ಹೆಚ್.ಬಸವರಾಜ್:- ನಮ್ಮ ಕ್ಷೇತ್ರದ ಪಂಚಾಯತಿಯ ವ್ಯಾಪ್ತಿಯಲ್ಲಿ ಬರತಕ್ಕಂಥ ಕೆರು ನೀರು ಸರಬರಾಜಿನಲ್ಲಿ ಬೇರೆ ಪಂಚಾಯತಿಯ ವ್ಯಾಪ್ತಿಯ ಗ್ರಾಮ ಸೇರಿರುತ್ತದೆ. ಅಡಚಣೆ ಬಂದಾಗ ಎರಡೂ ಪಂಚಾಯತಿಯವರು ಯಾರು ಅದನ್ನು ರಿಪೇರಿ ಮಾಡಬೇಕೆಂಬ ವಿಚಾರದ ಗೊಂದಲದಲ್ಲಿ ರಿಪೇರಿ ಮಾಡದೇ ನೀರಿನ ಸರಬರಾಜು ತೊಂದರೆಗೆ ಸಿಕ್ಕಿರುತ್ತದೆ. ಇದಕ್ಕೆ ಸರಕಾರ ಒಂದು ಉಪಾಯವನ್ನು ಸೂಚಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:- ಸನ್ಮಾನ್ಯ ಅಧ್ಯಕ್ಷರೇ, ಇದೊಂದು ಸಮಸ್ಯೆ ಆಗಬಾರದು. ಇದೊಂದು ದುರ್ದೈವದ ಸಂಗತಿ. ತಾಲ್ಲೂಕು ಪಂಚಾಯತಿಯವರು ಈ ವಿಷಯದಲ್ಲಿ ತತ್‌ಕ್ಷಣವೇ ಕ್ರಮ ತೆಗೆದುಕೊಳ್ಳಬೇಕೆಂಬ ಮಾತನ್ನು ಕೂಡ ಹೇಳಿದ್ದೇವೆ. ಈ ವಿಚಾರದಲ್ಲಿ ಯಾರು ರಿಪೇರಿ ಮಾಡಿದರೂ ಕೂಡ ಅಷ್ಟೆ. ಗ್ರಾಮಪಂಚಾಯತಿಯ ಅನುದಾನದಲ್ಲಿಯೂ ನಾವು ಇದನ್ನು ಮುಟ್ಟುಗೋಲು ಹಾಕಿಕೊಳ್ಳುವುದಿಲ್ಲ. ಆದ್ದರಿಂದ ತಾಲ್ಲೂಕು ಪಂಚಾಯತಿಯವರಿಗೆ ತಾವು ದಯಮಾಡಿ ಹೇಳಿ, ಇಲ್ಲದಿದ್ದರೆ ಈ ದಿವಸವೇ ತಾವು ಪತ್ರವನ್ನು ಕೊಟ್ಟರೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸೂಚನೆ ಕೊಡುತ್ತೇನೆ.

ಶ್ರೀ ಗೋವಿಂದ ಎಂ.ಕಾರಜೋಳ:- ಮಾನ್ಯ ಅಧ್ಯಕ್ಷರೇ.....

ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ .....

ಅಧ್ಯಕ್ಷರು:- ಮಾನ್ಯ ಶಿವಪ್ಪನವರೇ, ನಾನು ಕಾರಜೋಳರವರನ್ನು ಕರೆದಿದ್ದೇನೆ. ಅವರಿಗೂ ಅವಕಾಶ ಕೊಡೋಣ. You must be more magnanimous.

ಶ್ರೀ ಗೋವಿಂದ ಎಂ.ಕಾರಜೋಳ:- ಸನ್ಮಾನ್ಯ ಅಧ್ಯಕ್ಷರೇ, ಗ್ರಾಮಾಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ಕಳಪೆ ಗುಣಮಟ್ಟದ ಕೊಳವೆಗಳನ್ನು ಮತ್ತು ಸಾಮಾಗ್ರಿಗಳನ್ನು ಖರೀದಿಸತಕ್ಕಂಥ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಸರ್ಕಾರದಲ್ಲಿ ಒಂದು ವ್ಯವಸ್ಥೆ ಇರುತ್ತದೆ. ಈ ಸಾಮಗ್ರಿಗಳ ದರ ಮತ್ತು ಗುಣಮಟ್ಟವನ್ನು ನಿಗದಿ ಮಾಡಲು ಸ್ಟೋರ್ಸ್‌ಪರ್ಚೇಸ್ ಇಲಾಖೆ ಮತ್ತು ಡೈರೆಕ್ಟರ್ ಜನರಲ್ ಆಫ್ ಸಪ್ಲೈಸ್ ಅಂಡ್ ಡಿಸ್ಪೋಸಲ್ ಮತ್ತು ಕೆಎಸ್‌ಎಂಸಿಯವರು ಮಾಡುತ್ತಾರೆ. ಈ ದರ ನಿಗದಿ ಮಾಡಲು ಹೋಗುವಾಗ ಗುಣಮಟ್ಟವನ್ನೂ ಕೂಡ ನಿಗದಿ ಮಾಡಬೇಕಾಗುತ್ತದೆ. ಆದರೆ ಅಲ್ಲಿ ತಂತ್ರಜ್ಞರು ಇಲ್ಲದ್ದರಿಂದ ಹಾಗೂ ಇಂಜನೀಯರುಗಳು ಇಲ್ಲದಿರುವುದರಿಂದ ಹಾಗೂ ಯಾರೋ

ಗುಣಮಟ್ಟವನ್ನು ತಿಳಿದವರು ಇಲ್ಲದಿದ್ದುರಿಂದ ಗುಣಮಟ್ಟ ಮತ್ತು ದರ ನಿಗದಿಮಾಡುವ ವ್ಯವಸ್ಥೆಯು ಸರಿಯಾಗಿ ಇಲ್ಲದಿರುವುದರಿಂದ ಇಲಾಖೆಗೆ ಕಳಪೆ ಗುಣಮಟ್ಟದ ಸಾಮಗ್ರಿಗಳನ್ನು ಒದಗಿಸುವಂಥ ವ್ಯವಸ್ಥೆಯು ಈಗ ಇದೆ. ಆದ್ದರಿಂದ ಬರೀ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳುವುದರ ಬದಲಾಗಿ ಯಾರು ದರವನ್ನು ನಿಗದಿ ಮಾಡುತ್ತಾರೆ, ಯಾರು ಸ್ಪೆಸಿಫಿಕೇಷನ್ ನಿಗದಿ ಮಾಡುತ್ತಾರೆ ಅಂಥವರ ಮೇಲೆಯೂ ಕೂಡ ಸರಕಾರವು ಕ್ರಮ ತೆಗೆದುಕೊಂಡರೆ ಯೋಜನೆಗೆ ಮತ್ತು ಇಲಾಖೆಗೆ ಉತ್ತಮವಾದ ಗುಣಮಟ್ಟದ ಸಾಮಗ್ರಿಗಳನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಈ ವಿಚಾರವನ್ನು ತಮ್ಮ ಮೂಲಕ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ.ಪ್ರಕಾಶ್:- ಮಾನ್ಯ ಕಾರಜೋಳದವರಿಗೆ ಇಂಥ ವಿಚಾರದಲ್ಲಿ ಹೆಚ್ಚು ಅನುಭವ ಇರುವುದರಿಂದ ಎಸ್‌ಪಿಡಿ ರೇಟ್ ಕಾಂಟ್ರಾಕ್ಟ್‌ನ್ನು ಹೇಗೆ ಮಾಡುತ್ತಾರೆ ಎಂಬ ವಿಚಾರ ಕೂಡ ಎಲ್ಲರಿಗೂ ಗೊತ್ತಿದೆ. ಇದು ಬರೀ ಇವರಿಗೇ ಸಂಬಂಧಪಟ್ಟದ್ದು ಅಲ್ಲ. ಅದರ ವ್ಯಾಪ್ತಿಯಲ್ಲಿ ಸ್ಪೋರ್ ಪರ್ಚೇಸ್‌ನಲ್ಲಿ ಖರೀದಿ ಮಾಡತಕ್ಕಂಥವರು ಕೂಡ ಅನೇಕ ಸಂದರ್ಭಗಳಲ್ಲಿ ಉದ್ದೇಶಪೂರ್ವಕವಾಗಿ ನಿಯಮಾವಳಿಗಳನ್ನು ತಪ್ಪಿಸಿ ಬೇರೆ ಕಡೆಗಳಿಂದ ಖರೀದಿ ಮಾಡಿರತಕ್ಕಂಥಾದ್ದು ಕೂಡ ಇದೆ. ಈಗ ನಾವು ಸಬ್‌ಮರ್ಸಿಬಲ್ ಪಂಪ್‌ಸೆಟ್‌ಗಳನ್ನು ತೆಗೆದುಕೊಳ್ಳುವಾಗ ಐಎಸ್‌ಐ ಮಾರ್ಕ್ ಒಂದನ್ನೇ ನೋಡಬೇಕಾಗುವುದಿಲ್ಲ. ಅದರ ಜೊತೆಗೆ 40 ಪರ್ಸೆಂಟ್ ಎಫಿಷಿಯನ್ಸಿ ಇರತಕ್ಕಂಥಾದ್ದಕ್ಕೆ ಕೂಡ ಒತ್ತಡ ಕೊಡುತ್ತೇವೆ. ಅದನ್ನು ತೆಗೆದುಕೊಳ್ಳಬೇಕೆಂಬ ಮಾತನ್ನು ಕೂಡ ಹೇಳಿದ್ದೇವೆ. ಎಫಿಷಿಯೆನ್ಸಿ ಮಾತುಗಳು ಬಂದಾಗ ಅಂಥ ಪಂಪ್‌ಸೆಟ್‌ಗಳ ತಯಾರಕರು ಯಾರು ಯಾರು ಬರುತ್ತಾರೆ ಎಂಬುದೂ ಕೂಡ ಗೊತ್ತಾಗುತ್ತದೆ. ನೀವು ಹೇಳಿದಂತೆ ಅದು ವರ್ಷಕ್ಕೊಮ್ಮೇ ಆಗುತ್ತದೆ. ಆ ಇಲಾಖೆಯು ನನ್ನ ಕೈಯಲ್ಲಿ ಇಲ್ಲ. ಅದು ಬೇರೆ ಇಲಾಖೆಗೆ ಸಂಬಂಧಪಟ್ಟಂಥದ್ದು. ತಾವು ಕೂಡ ಅವರಿಗೆ ತಮ್ಮ ಸಲಹೆಗಳನ್ನು ಬರೆಯಬಹುದು, ನಾನೂ ಕೂಡ ಬರೆಯುತ್ತೇನೆ. ಇದು ನಮ್ಮೆಲ್ಲರ ಅನುಭವ ಕೂಡ ಆಗಿರುತ್ತದೆ ಎಂಬುದನ್ನು ನಾನು ಹೇಳುತ್ತೇನೆ.

ಅಧ್ಯಕ್ಷರು:- ಈಗ ಪ್ರಶ್ನೋತ್ತರ ಮುಗಿಯಿತು. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದ ವಿಚಾರ....

ಅಧ್ಯಕ್ಷರು:- ನೋಡಿ ಶಿವಪ್ಪನವರೇ, ಈಗಾಗಲೇ ಅರ್ಧಗಂಟೆ ಜಾಸ್ತಿ ಆಗಿದೆ. ಎಂದೂ ಏಳದಿರತಕ್ಕಂಥ ಹೊಸ ಸದಸ್ಯರಿಗೆಲ್ಲಾ ಅವಕಾಶವನ್ನು ಕೊಟ್ಟಿದ್ದೇನೆ. ಕೆಲವು ಪ್ರಮುಖವಾದ ಪ್ರಶ್ನೆಗಳ ಮೇಲೆ ಉಪಪ್ರಶ್ನೆಗಳನ್ನು 10-15 ಕೊಟ್ಟಿದ್ದೇನೆ. You should understand my difficulties.

SRI H.SHIVAPPA:- I will not take much time....

MR.SPEAKER:- The ruling side should come to my rescue. You should trim up some of your Members. ಈವತ್ತು ಬಸವರಾಜ್‌ರವರು ಎದ್ದಿದ್ದರು. ಸುಭಾಷ್ ಗುತ್ತೇದಾರ್‌ರವರು ಎದ್ದಿದ್ದರು ಚಂದ್ರಪ್ಪನವರು ಎದ್ದಿದ್ದರು. Some new members have never got up in this House. I have a duty to encourage those members. It becomes very difficult for me.

ಶ್ರೀ ಹೆಚ್.ಶಿವಪ್ಪ:- ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆ ಇಂದ ತಮ್ಮ ಮನಸ್ಸಿಗೆ ನೋವು ಆಗಿದ್ದರೆ ಕ್ಷಮಿಸಬೇಕು. I will concede and I will sit down.

MR.SPEAKER:- You should also understand my difficulty. I should run the House.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮಾಣಾಭಿವೃದ್ಧಿ ಸಚಿವರು):- ಮಾನ್ಯ ಅಧ್ಯಕ್ಷರೇ, ದಿನಾಂಕ: 10-7-96ರ ನಾಲ್ಕನೇ ಪಟ್ಟಿಯಲ್ಲಿರುವ ಲಿಖಿತ ಮೂಲಕ ಉತ್ತರಿಸುವ 59 ಪ್ರಶ್ನೆಗಳ ಪೈಕಿ 54ಪ್ರಶ್ನೆಗಳ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ವಿಷಯ:- ಧಾರವಾಡ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ತೆರೆದಿರುವ ಗ್ರಂಥಾಲಯಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 110 (480)

ಶ್ರೀ ಅಶೋಕ್ ಕಾಟವೆ (ಹುಬ್ಬಳ್ಳಿ):- ಮಾನ್ಯ ವಯಸ್ಕರ ಶಿಕ್ಷಣ ಮತ್ತು ಗ್ರಂಥಾಲಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ಎಷ್ಟು ಗ್ರಂಥಾಲಯಗಳನ್ನು ತೆರೆಯಲಾಗಿದೆ; ಇದಕ್ಕೆ ತಗಲುವ ವೆಚ್ಚ ಎಷ್ಟು;

ಆ) ಈ ಜಿಲ್ಲೆಯಲ್ಲಿ 1995-96ನೇ ಸಾಲಿನಲ್ಲಿ ಗ್ರಂಥಾಲಯಗಳ ಪುಸ್ತಕಗಳಿಗಾಗಿ ನಿಗಧಿಪಡಿಸಿ ಬಿಡುಗಡೆ ಮಾಡಿದ ಹಣವೆಷ್ಟು;

ಇ) ಗ್ರಂಥಾಲಯಗಳನ್ನು ತೆಗೆಯಲು ಮುಂದೆ ಬಂದಿರುವ ಸ್ವಯಂ ಸೇವಾ ಸಂಸ್ಥೆಗಳೆಷ್ಟು ಅವುಗಳಲ್ಲಿ ಎಷ್ಟು ಸಂಸ್ಥೆಗೆ ಅನುಮತಿ ಹಾಗೂ ಧನ ಸಹಾಯ ನೀಡಲಾಗಿದೆ.

ಈ) ಗ್ರಂಥಾಲಯಗಳಿಂದ ಎಷ್ಟು ನಾಗರೀಕರು ಉಪಯೋಗ ಪಡೆದಿದ್ದಾರೆ.

ಉ) ಕನ್ನಡ ಅಭಿವೃದ್ಧಿ ಪ್ರಾಧಿಕಾರದಿಂದ ಪುಸ್ತಕಗಳಿಗಾಗಿ ಸಹಾಯ ಪಡೆಯಲಾಗಿದೆಯೇ; ಹಾಗೂ ಧಾರವಾಡ ಜಿಲ್ಲೆಯ ಲೇಖಕರಿಂದ ಎಷ್ಟು ಪುಸ್ತಕಗಳನ್ನು